**D.W**-1

<u>**ದಿನಾಂಕ 19.03.2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**</u>

<u>**ಪಾಟೀ ಸವಾಲುಃ ಪಿರ್ಯಾದಿ ಪರ ಶ್ರೀ ಪಿ ಎಸ್ ಸಿ ವಕೀಲರಿಂದಃ**</u>

1. ನನಗೆ ಪಿರ್ಯಾದಾರನ ಪರಿಚಯ ಇದೆ ಎಂದರೆ ನಿಜ. ಆತನ ಪರಿಚಯ ಸುಮಾರು 2-3 ವರ್ಷಗಳಿಂದ ಇದೆ. ನಾನು ಕೂಲಿ ಕೆಲಸ ಅಂದರೆ ಕಟ್ಟದಲ್ಲಿ ಮಾಡುತ್ತೇನೆ. ಕೆಲವೊಂದು ಬಾರಿ ಚಾಲಕನ ಕೆಲಸಕ್ಕೆ ಹೋಗುತ್ತೇನೆ. ನನಗೆ ಕೂಲಿಯಿಂದ ದಿನಕ್ಕೆ 300 ರಿಂದ 400 ರೂಪಾಯಿ ಬರುತ್ತದೆ. ನನಗೆ ಕೂಲಿ ಕಾರ್ಮಿಕರ ದಾಖಲೆ ಇಲ್ಲ. ನಾನು ಸಿಹಿ ತಿಂಡಿಗಳ ವ್ಯಾಪಾರ ಮಾಡುತ್ತಿದ್ದರು ಕೂಡಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ರಾಣೇಬೆನ್ನೂರು , ರಟ್ಟಿಹಳ್ಳಿ ಮತ್ತು ಸುತ್ತಮುತ್ತಲಿನ ಊರುಗಳಲ್ಲಿ ಮಾರುತಿ ಒಮಿನಿ ಕಾರಿನಲ್ಲಿ ಸಿಹಿ ತಿಂಡಿಗಳು ಮತುತ ಬೇಕರಿ ತಿನುಸುಗಳನ್ನುವ್ಯಾಪಾರ ಮಾಡುತ್ತೇನೆ ಎಂದರೆ ಸರಿಯಲ್ಲ. ನಾನು ಬೇರೆ ಪ್ರದೇಶಗಳಲ್ಲಿ ಅದೇ ವ್ಯಾಪಾರ ಮಾಡುತ್ತೆನೆ ಎಂದರೆ ಸರಿಯಲ್ಲ.

2. ಪಿರ್ಯಾದಿ ಕೂಡಾ ಸಂತೆಯಲ್ಲಿ ಕಾಳು ಕಡಿ ಮಾರಾಟ ಮಾಡಿ ಸಂತೆಯಲ್ಲಿ ವ್ಯಾಪಾರ ಮಾಡುತ್ತಿದ್ದರಿಂದ ಅಲ್ಲಿ ನನಗೆ ಪರಿಚಯವಾಗಿದೆ ಎಂದರೆ ಸರಿಯಲ್ಲ. ಪಿರ್ಯಾದಿ ಕಡೆಯಿಂದ 30 ಸಾವಿರ ಹಣ ಯಾವ ದಿನಾಂಕದಿಂದ ಪಡೆದಿದ್ದೆ ಎಂದು ನೆನಪಿಲ್ಲ. ಸದರಿ 30 ಸಾವಿರ ಹಣವನ್ನುಪಿರ್ಯಾದಿಯ ಮನೆಯಲ್ಲಿ ನನಗೆ ವ್ಯಯಕ್ತಿಕ ಕೆಲಸಕ್ಕಾಗಿ ಪಡೆದಿರುತ್ತೇನೆ. ಆ ಸಮಯದಲ್ಲಿ ನನ್ನ ಜೊತೆ ಮಲ್ಲಿಕಾರ್ಜುನ ಹಿರೇಮಠ ಅಂಬುವವರು ಇದ್ದರು. ಸದರಿ 30 ಸಾವಿರ ಹಣವನ್ನು ಫೋನ್ ಪೇ ಮೂಲಕ ಪಿರ್ಯಾದಿಗೆ ಕೊಟ್ಟಿರುತ್ತೇನೆ. ನಾನು ಇದೇ ರೀತಿ ಪಿರ್ಯಾದಿ ಕಡೆಯಿಂದ ಹಣದ ಅಡಚಣೆ ಇದ್ದಾಗ 3 ರಿಂದ 4 ಬಾರಿ ಹಣ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಕೇವಲ ಒಂದು ಬಾರಿ ಮಾತ್ರ ಪಡೆದಿರುತ್ತೇನೆ ಎಂದು ಹೇಳುತ್ತಾರೆ.

3. ಫೋನ್ ಪೇ ಮೂಲಕ ಕೊಟ್ಟ ಹಣದ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ನಾನು ಆ ಕುರಿತು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪಿಗ್ಮಿ ಮೂಲಕ 14 ಸಾವಿರ ಹಣ ಕಟ್ಟಿದ್ದು ಉಳಿದ ಹಣವನ್ನು ಫೋನ್ ಪೇ ಮೂಲಕ ಕಟ್ಟಿಟರುತ್ತೇನೆ ಎಂದು ಹೇಳುತ್ತಾರೆ. ಸದರಿ ಪಿಗ್ಮಿ ಹಣವನ್ನು ನಾನು ಯಾವ ದಿನಾಂಕದಿಂದ ಯಾವ ದಿನಾಂಕದವರೆಗೆ ಕಟ್ಟಿರುತ್ತೇನೆ ಎಂದು ನಿಖರವಾಗಿ ಹೇಳಲು ಬರುವುದಿಲ್ಲ. ಪಿಗ್ಮಿ ಕಟ್ಟಿದ ಕುರಿತು ಯಾವುದೇ ದಾಖಲು ಹಾಜರು ಪಡಿಸಿಲ್ಲ ಎಂದರೆ ನಿಜ.

4. ಖಾತಗಿ ವ್ಯಕ್ತಿಗಳು ಪಿಗ್ಮಿ ಹಣವನ್ನು ಯಾವತ್ತು ಕಟ್ಟಿಕೊಳ್ಳುವುದಿಲ್ಲ ಎಂದರೆ ಪಿರ್ಯಾದಿ ಕಟ್ಟಿಸಿಕೊಳ್ಳುತ್ತಾರೆ ಎಂದು ಹೇಳುತ್ತಾರೆ. ಪಿರ್ಯಾದಿ ಯಾವುದೇ ಸಂಘ ಸಂಸ್ಥೆಗಳನ್ನು ನಡೆಸುದಿಲ್ಲ ಎಂದರೆ ಸರಿಯಲ್ಲ.ಸದರಿ ಪಿರ್ಯಾದಿ ನಡೆಸುವ ಸಂಘ ಸಂಸ್ಥೆಯ ಹೆಸರು ಗೊತ್ತಿಲ್ಲ. ಆತ ಯಾದೇ ಸಂಘ ಸಂಸದೆಯಿಂದ ಪಿಗ್ಮಿ ಹಣ ಕಟ್ಟುವುದಿಲ್ಲ ಸ್ವತಹ ಹಣವನ್ನು ಸಂಗ್ರಹಿಸುತ್ತಾನೆ. ಸದರಿ ಡೈರಿ ಮೂಲಕ ಹಣವನ್ನು ಪಡೆದುಕೊಳ್ಳುತ್ತಾರೆ ಎಂದು ಹೇಳುತ್ತಾರೆ. ಸದರಿ ಬುಕ್ಕಿನ ಡೈರಿಯನ್ನು ಹಾಜರು ಪಡಿಸಲು ಪಿರ್ಯಾದಿ ಲೆಕ್ಕ ಮಾಡಿ ಕೊಡುತ್ತೇನೆ ಎಂದು ಪಡೆದು ಮರಳಿ ಕೊಟ್ಟಿರುವುದಿಲ್ಲ ಎಂದು ಹೇಳುತ್ತಾರೆ. ಪಿರ್ಯಾದಿ ಯಾವುದೇ ಪಿಗ್ಮಿ ಹಣ ಕಟ್ಟುಸಿಕೊಳ್ಳುವುದಿಲ್ಲ ಮತ್ತು ನಾನು ಯಾವುದೇ ರೀತಿಯ ಹಣ ಕಟ್ಟಿಲ್ಲಎಂದರೆ ಸರಿಯಲ್ಲ.

5. ಚೆಕ್ಕನ್ನು ನಾನು ಮರಳಿ ಕೊಡಿ ಎಂದು ನಾನು ಪಿರ್ಯಾದಿಗೆ ಕೇಳಿಕೊಂಡಿರುತ್ತೇನೆ. ಆದರೆ ಯಾವ ದಿನಾಂಕದಂದು ಕೇಳಿದ್ದೆ ಎಂದು ಹೇಳಲು ಬರುವುದಿಲ್ಲ. ನಿಪಿ-1 ರಲ್ಲಿ ಬರೆದ ಅಕ್ಷಗಳು

ನನ್ನದಲ್ಲ ಎಂದು ಹೇಳುತ್ತಾರೆ. ಪಿರ್ಯಾದಿ ನನಗೆ ಅವಾಚ್ಯ ಶಬ್ದಗಳಿಂದ ಬೈದಾಗ ಬೇರೆ ಯಾರು ಇದ್ದಿರಲಿಲ್ಲ ನಾನು ಒಬ್ಬನೆ ಇದ್ದೆ ಎಂದು ಹೇಳುತ್ತಾರೆ. ಆತ ಅವಾಚ್ಯ ಶಬ್ದಗಳಿಂದು ಬೈದಿದ್ದಕ್ಕೆ ಯಾವುದೇ ದೂರು ಕೊಟ್ಟಿಲ್ಲ. ನನಗೆ ಪಿರ್ಯಾದಿ ಅಥವಾ ದೂರು ಕೊಡಲು ಯಾವುದೇ ತೊಂದರೆ ಇದ್ದಿರಲಿಲ್ಲ. ಸದರಿ ಯಾವುದೇ ಘಟನೆಗಳು ನಾನು ಹೇಳಿದಂತೆ ನಡೆದಿಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

6. ದಿಃ 10-11-2021 ರಂದು ಪಿರ್ಯಾದಿ ಕಡೆಯಿಂದ 3 ಲಕ್ಷ ಹಣವನ್ನು ಸಾಲವಾಗಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು 3 ತಿಂಗಳಗಳೊಗಾಗಿ ಮರಳಿ ಕೊಡುತ್ತೇನೆ ಎಂದು ವಾಗ್ದಾನ ಮಾಡಿದ್ದೆ ಎಂದರೆ ಸರಿಯಲ್ಲ. ನನಗೆ 3 ಲಕ್ಷ ಹಣದ ಅವಶ್ಯಕತೆ ಇದ್ದಿರಲಿಲ್ಲ ಎಂದು ಹೇಳುತ್ತಾರೆ. ಸದರಿ 3 ಲಕ್ಷ ಹಣವನ್ನು ನನ್ನ ವ್ಯಾಪಾರಕ್ಕಾಗಿ, ವ್ಯಾಪಾರ ಅಭಿವೃದ್ದಿಗಾಗಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹಣವನ್ನು ನಾನು ನಗದು ರೂಪದಲ್ಲಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕನ್ನು ಪಿರ್ಯಾದಿಗೆ ಕೊಟ್ಟು ಹಣ ಮರಳಿ ಪಡೆಯಿರಿ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ತೋರಿಸಿದ ಖಾತೆ ನನಗೆ ಸಂಬಂಧಿಸಿದ್ದು ಇರುತ್ತದೆ. ನಿಪಿ-1 ಚೆಕ್ಕನ್ನು ನನ್ನದೇ ಇರುತ್ತದೆ ಅದನ್ನು 30 ಸಾವಿರ ಹಣಕ್ಕಾಗಿ ನೀಡಿರುತ್ತೇನೆ. ನಿಪಿ-1 ರಲ್ಲಿ ಇರುವ ಸಹಿ ನನ್ನದೆ. ನಿಪಿ-1 ರಲ್ಲಿ ಬರೆದ ಅಕ್ಷಗಳು ನಾನೇ ಬರೆದುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

7. ನಿಪಿ-1 ನ್ನು ಚೆಕ್ಕು ಅಮಾನ್ಯಗೊಂಡು ಸಾಕಷ್ಟು ಹಣ ಇಲ್ಲ ಎಂದು ಪಿರ್ಯಾದಿಗೆ ಹಿಂಬರಹ ಕೊಟ್ಟಿರುತ್ತಾರೆ ಎಂದರೆ ನಿಜ. ಸದರಿ ಪಿರ್ಯಾದಿ ನನಗೆ ಬೇಡಿಕೆ ನೋಟಿಸನ್ನು ಜಾರಿ ಮಾಡಿರುತ್ತಾನೆ

ಎಂದರೆ ನಿಜ. ಸದರಿ ಬೇಡಿಕೆ ನೋಟಿಸನ್ನು ನಾನು ಪಡೆದುಕೊಂಡಿರುತ್ತೇನೆ. ನಂತರ ಪಿರ್ಯಾದಿಗೆ ಬೇಟಿಯಾಗಿ ಅಷ್ಟು ಪಡೆದಿಲ್ಲ. ಯಾಕೆ ಅಷ್ಟು ಹಣಕ್ಕೆ ನೋಟಿಸು ಕೊಟ್ಟಿರುತ್ತಿರಿ ಎಂದು ಕೇಳಿರುತ್ತೇನೆ. ಯಾವದಿನಾಂಕದಂದು ಆ ರೀತಿ ಕೇಳಿರುತ್ತೇನೆ ಎಂದು ನನಗೆ ಹೇಳಲು ಬರುವುದಿಲ್ಲ. ನಾನು ಆ ರೀತಿ ಪಿರ್ಯಾದಿಗೆ ಕೇಳಿಲ್ಲ ಮತ್ತು ನೋಟಿಸ್ಸಿಗೆ ಯಾವುದೇ ಉತ್ತರ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನೋಟಿಸ್ಸು ಕೊಟ್ಟ ಬಗ್ಗೆ ನಮೂದಿಸಿಲ್ಲ ಕಾರಣ ನಾನು ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ. ನಾನು ಚೆಕ್ಕನ್ನು ಭದ್ರತೆಗಾಗಿ ಕೊಟ್ಟಿರುತ್ತೇನೆ ಎಂದುಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ಎಲ್ಲ ದಾಖಲೆಗಳು ಈ ಪ್ರಕರಣಕ್ಕೆ ಸಂಬಂಧಿಸಿದ್ದು ಅಲ್ಲವು ಅಂದರೆ ಸರಿಯಲ್ಲ. ಸದರಿ ನಿಡಿ-1 ರಿಂದ 10 ರಲ್ಲಿ ತೋರಿಸಿದ ವ್ಯಕ್ತಿಗಳು ಪಿರ್ಯಾದಿ ಕಡೆಯಿಂದ ಕೈಗಡ ಸಾಲಪಡೆದಿರುತ್ತಾರೆ ಎಂದರೆ ಸರಿಯಲ್ಲ.

8. ಪಿರ್ಯಾದಿ ಕಡೆಯಿಂದ 3 ಲಕ್ಷ ಹಣ ಪಡೆದಿದ್ದರು ಸಹ ಪಡೆದ್ದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**(ಓ.ಹೇ.ಕೇ.ಸ.)**

**3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫಸಿ, ರಾಣೆಬೆನ್ನೂರ.**

**ಸಾಕ್ಷಿದಾರರ ಸಹಿಃ**